KAKB720012912019

Presented on : 14-10-2019
Registered on : 14-10-2019
Decided on : 06.04.2026
Duration : 6 years 5 months 23 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**

**ಶ್ರೀ ಬಾಲು,**
ಬಿ.ಎ., ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

**ಸಿ.ಸಿ.ನಂ.542/2019**

**ದಿನಾಂಕಃ 06 ನೇ ಏಪ್ರಿಲ್ 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ (ಸೇಡಂ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ದ -**

**ಆರೋಪಿತರುಃ** 1. ನಾಗಪ್ಪಾ ತಂದೆ ಮಲ್ಲಪ್ಪಾ ಮುದ್ದಣಿ,
ವಯಸ್ಸುಃ 65 ವರ್ಷ, ಉದ್ಯೋಗಃ ಒಕ್ಕಲುತನ,

2. ಮಲ್ಲಪ್ಪಾ ತಂದೆ ನಾಗಪ್ಪಾ ಮುದ್ದಣಿ,
ವಃ 28 ವರ್ಷ, ಉಃ ಒಕ್ಕಲುತನ,
ಎಲ್ಲರೂ ಸಾಃ ಹಾಬಾಳ (ಟಿ) ಗ್ರಾಮ.

**(ಆ-1 ಮತ್ತು 2 ಶ್ರೀ ಎ.ಎಮ್., ವಕೀಲರು)**

| | | | |
|---|---|---|---|
| 1. | ಪ್ರಕರಣ ನಡೆದ ದಿನಾಂಕ | : | 09.08.2019 |
| 2. | ಪ್ರಕರಣ ದಾಖಲಾದ ದಿನಾಂಕ | : | 09.08.2019 |
| 3. | ಫಿರ್ಯಾದಿದಾರರ ಹೆಸರು | : | ಶ್ರೀ ಬಸವಂತರೆಡ್ಡಿ ತಂದೆ ಮಲ್ಲಿಕಾರ್ಜುನರೆಡ್ಡಿ ನರಸರೆಡ್ಡಿ |

4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕಃ 01.04.2026

5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕಃ 01.04.2026

6. ಆಪಾದನೆಗಳು : ಭಾ.ದಂ.ಸಂ.ಕಲಂ.341,323, 324,504 ಮತ್ತು 506 ಸಂಗಡ 34.

7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ .**

## ತೀರ್ಪು

ಆರಕ್ಷಕ ಉಪ-ನಿರೀಕ್ಷಕರು ಸೇಡಂ ಪೋಲಿಸ ಠಾಣೆ ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-**

ದಿನಾಂಕ 09.08.2019 ರಂದು ಬೆಳಗ್ಗೆ 08.30 ಗಂಟೆ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಹಾಬಾಳ (ಟಿ) ಗ್ರಾಮದ ಹೊರಗಡೆ ಇರುವ ಪ್ರಕರಣದ ಆರೋಪಿತನಾದ ನಾಗಪ್ಪಾ ಮುದ್ದಣಿ ಇವರ ಹೊಲದ ಬಂದಾರಿಯಲ್ಲಿರುವ ಕಚ್ಚಾ ರಸ್ತೆಯಿಂದ ಚಾಸಾ.1 ರಿಂದ 4 ರವರು ಕೂಡಿ ತಮ್ಮ ಹೊಲಕ್ಕೆ ಔಷಧಿ ಹೊಡೆಯಲು ಟ್ರಾಕ್ಟರ ತೆಗೆದುಕೊಂಡು ಹೋಗುತ್ತಿದ್ದಾಗ ಆರೋಪಿ.1 ಮತ್ತು 2 ರವರು ಕೂಡಿ ತಮ್ಮ ಹೊಲದ ಹತ್ತಿರ ಬಂದಾರಿಯಲ್ಲಿರುವ ಕಚ್ಚಾ ರಸ್ತೆಯಲ್ಲಿ ಟ್ರಾಕ್ಟರಗೆ ಎದುರುಗಡೆ ಹೋಗಿ ಚಾಸಾ.1 ರಿಂದ 4

ನೆದ್ದವರಿಗೆ ತಡೆದು ನಿಲ್ಲಿಸಿ ಬೋಸಡಿ ಮಕ್ಕಳೆ ಇದು ನಮ್ಮ ಹೊಲ ಇರುತ್ತದೆ ನೀವು ನಮ್ಮ ಹೊಲದಲ್ಲಿ ಟ್ರಾಕ್ಟರ ಯಾಕೆ ತೆಗೆದುಕೊಂಡು ಬಂದಿದ್ದಿರಿ ಅಂತಾ ಜಗಳ ತೆಗೆದು ಬೋಸಡಿ ಮಕ್ಕಳೆ ನಿಮಗೆ ಸೊಕ್ಕು ಬಂದಿದೆ ಇವತ್ತು ಏನಾದರು ಆಗಲಿ ನಿಮಗೆ ಬಿಡುವುದಿಲ್ಲಾ ಹೊಡೆದು ಖಲಾಸ ಮಾಡುತ್ತೇನೆ ಅಂತಾ ಜೀವದ ಬೆದರಿಕೆ ಹಾಕಿ ಆರೋಪಿ.1 ನೇದ್ದವನು ಕಲ್ಲಿನಿಂದ ಚಾಸಾ.1 ನೆದ್ದವರ ಬೆನ್ನಿಗೆ ಹೊಡೆದು ಗುಪ್ತಗಾಯ ಪಡಿಸಿದ್ದು, 2ನೇ ಆರೋಪಿತನು ಚಾಸಾ.2 ನೇದ್ದವನಿಗೆ ಕೈ ಮುಷ್ಠಿ ಮಾಡಿ ಬೆನ್ನಿಗೆ ತಲೆಗೆ ಇತರಕಡೆ ಹೊಡೆದು ಗುಪ್ತಗಾಯ ಪಡಿಸಿದ್ದು ಚಾಸಾ.3 ಮತ್ತು 4 ರವರು ಬಿಡಿಸಲು ಹೋದಾಗ ಅವರಿಗೆ ಆರೋಪಿತರು ಬೋಸಡಿ ಮಕ್ಕಳೆ ನೀವು ಇದರಲ್ಲಿ ಮಧ್ಯ ಬಂದರೆ ನಿಮಗೆ ಬಿಡುವುದಿಲ್ಲ ಅಂತಾ ಅವರಿಗೆ ಹೊಡೆಯಲು ಹೋದಾಗ ಅಲ್ಲೆ ರಸ್ತೆಯಿಂದ ಹೊಲಕ್ಕೆ ಹೋಗುತ್ತಿದ್ದ ಚಾಸಾ.5 ರಿಂದ 7 ರವರು ಬಂದು ಆರೋಪಿತರಿಗೆ ಬಿಡಿಸಿ ಕಳಿಸಿದ್ದು ಆಗ ಆರೋಪಿತರು ಚಾಸಾ.1 ರಿಂದ 4 ರವರಿಗೆ ಬೋಸಡಿ ಮಕ್ಕಳೆ ನೀವು ಇನ್ನೊಮ್ಮೆ ಈ ದಾರಿಯಿಂದ ಟ್ರಾಕ್ಟರ ತೆಗೆದುಕೊಂಡು ಬಂದರೆ ನಿಮಗೆ ಜೀವಂತ ಬಿಡುವುದಿಲ್ಲ ಖಲಾಸ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ್ದು ಇರುತ್ತದೆಂದು ಪಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಸೇಡಂ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.134/2019 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ಆರೋಪಿತರನ್ನು ಸೂಕ್ತ ಜಾಮೀನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು, ಚಾಸಾ.2 ರವರನ್ನು ಪ್ರಾಸಾ.2 ಎಂದು, ಚಾಸಾ.3 ರವರನ್ನು ಪ್ರಾಸಾ.3 ಎಂದು ಮತ್ತು ಚಾಸಾ.4 ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ರಿಂದ 4 ದಾಖಲಾತಿಯನ್ನು ಗುರುತಿಸಿಕೊಂಡಿರುತ್ತದೆ ಮತ್ತು ಮು.ಮಾ.1ನ್ನು ಗುರುತಿಸಿಕೊಂಡಿರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ-1 ರಿಂದ 4 ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಪಿ.ಡಬ್ಲ್ಯೂ -1 ರಿಂದ 4ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 09-08-2019ರಂದು ಬೆಳಿಗ್ಗೆ 08.30 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ಹದ್ದಿಯಲ್ಲಿರುವ ಹಾಬಾಳ (ಟಿ) ಗ್ರಾಮದ ಸೀಮಾಂತರದಲ್ಲಿ ಚಾಸಾ.1 ಮತ್ತು 4 ರವರು ಹೊಲಕ್ಕೆ ಔಷದ ಸಿಂಪಡಿಸಲಿಕ್ಕೆ ಟ್ರಾಕ್ಟರನಲ್ಲಿ ಹೋಗುತ್ತಿದ್ದಾಗ, ಹಳೇ ವೈಷಮ್ಯದ ಹಿನ್ನಲೆಯಲ್ಲಿ ಆಗ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ.1 ಮತ್ತು 4 ರವರಿಗೆ ವಿನಾಕಾರಣ ಜಗಳ ತಗೆದು, ಟ್ರಾಕ್ಟರನ್ನು ಮುಂದೆ ಹೋಗದಂತೆ ಅಕ್ರಮವಾಗಿ ತಡೆದು ನಿಲ್ಲಿಸಿ, ಬೋಸುಡಿ ಮಕ್ಕಳೆ ನಿಮಗೆ ಸೊಕ್ಕು ಬಂದಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 341, 504 ಸಂಗಡ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.9 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು, 1 ನೇ ಆರೋಪಿ ಚಾಸಾ.1 ನೇದ್ದವನಿಗೆ ಕಲ್ಲಿನಿಂದ ಬೆನ್ನಿಗೆ ಹೊಡೆದಿದ್ದು, 2 ನೇ ಆರೋಪಿ ಚಾಸಾ.4 ನೇದ್ದವನಿಗೆ ಕೈಯಿಂದ ಬೆನ್ನಿಗೆ, ತಲೆಗೆ ಹೊಡೆದು ಗುಪ್ತಗಾಯಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 323, 324 ಸಂಗಡ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ

ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ನೇದ್ದವನ ಜೊತೆ ವಿನಾಕಾರಣ ಜಗಳ ತೆಗೆದು ಹೊಡಿಬಡಿ ಮಾಡುತ್ತಿದ್ದಾಗ, ಜಗಳ ಬಿಡಿಸಲು ಬಂದ ಚಾಸಾ.3 ಮತ್ತು 4 ನೇದ್ದವರಿಗೆ ಬೋಸುಡಿ ಮಕ್ಕಳೇ ನೀವು ಇದರಲ್ಲಿ ಮದ್ಯ ಬಂದರೆ ನಿಮಗೆ ಬಿಡುವುದಿಲ್ಲ ಖಲ್ಲಾಸ ಮಾಡುತ್ತೇವೆ ಅಂತಾ ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ ನಂ.1 ರಿಂದ 3 | : | ನಕರಾತ್ಮಕವಾಗಿ. |
| ಅಂಶ ನಂ.4 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**<u>ಕಾ ರ ಣ ಗ ಳು</u>**

10. **<u>ಅಂಶ ನಂ.1 ರಿಂದ 3:-</u>** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಆಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1 ಬಸವಂತ ರೆಡ್ಡಿ ತಂದೆ ಮಲ್ಲಿಕಾರ್ಜುನ ರೆಡ್ಡಿ ಇವರನ್ನು ಪ್ರಾ.ಸಾ.1 ಎಂದು, ಚಾಸಾ.2 ಚನ್ನಾ ರೆಡ್ಡಿ ತಂದೆ ಮಲ್ಲಿಕಾರ್ಜುನ ರೆಡ್ಡಿ ಇವರನ್ನು ಪ್ರಾಸಾ.2

ಎಂದು, ಚಾಸಾ.3 ಆಕಾಶ್ ತಂದೆ ಬಸಂತು ತಿರುವಲಿ ಇವರನ್ನು ಪ್ರಾಸಾ.3 ಎಂದು ಮತ್ತು ಚಾಸಾ.4 ನಾಗಪ್ಪ ತಂದೆ ಮಹದೇವ್ ಪೂಜಾರಿ ಇವರನ್ನು ಪ್ರಾಸಾ.4 ಎಂದು ಸಾಕ್ಷ್ಯಿ ಮಾಡಿಸಿದ್ದು ಇರುತ್ತದೆ. ಪ್ರಾಸಾ.1 ರವರು ಪ್ರಕರಣದ ಪಿರ್ಯಾಧಿದರರು, ಪ್ರಾಸಾ.2 ಮತ್ತು 3 ಪ್ರಕರಣದ ಸಾಕ್ಷಿದಾರರು, ಪ್ರಾಸಾ .4 ರವರು ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿರುತ್ತಾರೆ.

12. ಪ್ರಾಸಾ.1 ರವರು ಈ ಪ್ರಕರಣದ ಪಿರ್ಯಾಧಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಮತ್ತು ನನ್ನ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹೊಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಪಿರ್ಯಾದನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಸಾಕ್ಷಿಯು ದೂರು ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಆದರೇ ನಿಪಿ.1ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ.

13. ಪ್ರಾಸಾ.2 ರಿಂದ 4 ರವರು ಈ ಪ್ರಕರಣದ ಸಾಕ್ಷಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಮತ್ತು ನಮ್ಮ ನಡುವೆ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನಮಗೆ ಹೊಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾವು ಯಾವುದೇ ರೀತಿಯ ಹೇಳಿಕೆಯನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ.2 ರವರ ಹೇಳಿಕೆಯನ್ನು ನಿಪಿ.2 ಎಂದು, ಪ್ರಾಸಾ.3

ರವರ ಹೇಳಿಕೆಯನ್ನು ನಿಪಿ.3 ಎಂದು ಮತ್ತು ಪ್ರಾಸಾ.4 ರವರ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಿಕೊಂಡಿದ್ದು, ಒಂದು ಹಿಡಿ ಗಾತ್ರದ ಕಲ್ಲನ್ನು ಮು ಮಾ.1 ಎಂದು ಗುರುತಿಸಿಕೊಳ್ಳಲಾಗಿರುತ್ತದೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ.

14. ಈ ಪ್ರಕರಣದ ಬಹು ಮುಖ್ಯ ಸಾಕ್ಷಿದಾರರಾದ ಚಾಸಾ.1 ಸದರಿ ಪ್ರಕರಣದ ಪಿರ್ಯಾದಿದಾರರು. ಹಾಗೂ ಚಾಸಾ.2 ರಿಂದ 4 ರವರು ಪ್ರಕರಣದ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಯಾವುದೇ ಘಟನೆ ನಡೆದ ಬಗ್ಗೆ ಸಾಕ್ಷಿ ಹೇಳಿಲ್ಲ, ಅಲ್ಲದೆ ಪ್ರಾಸಾ.1 ರಿಂದ 4ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ, ಆದುದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಅಂತಾ ಕಂಡುಬರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ -1 ರಿಂದ 4ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಹಾಗೂ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದಿಸಲ್ಪಟ್ಟ ಕೃತ್ಯವನ್ನು ಆರೋಪಿತರು ಎಸಗಿದ್ದಾರೆ ಎನ್ನುವುದನ್ನು ನಿರೂಪಿಸಲು ಬಲವಾದ ಮತ್ತು ಒಪ್ಪಿಕೊಳ್ಳಬಹುದಾದ ಸಾಕ್ಷಾಧಾರಗಳನ್ನು ಒದಗಿಸಿ ನಿರೂಪಿಸುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅದೇ ರೀತಿ ಅಭಿಯೋಜನೆಯು ಆರೋಪಿತರ ಕೃತ್ಯ ನಿರೂಪಿಸುವಲ್ಲಿ ವಿಫಲವಾಗಿದೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ ಅಂಶ ಸಂಖ್ಯೆ 1 ರಿಂದ 3ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

15. **<u>ಅಂಶ ನಂ.4</u>:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 3ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

## <u>ಆ ದೇ ಶ</u>

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿ ನಂ.1 ಮತ್ತು 2 ರವರನ್ನು ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34ರನ್ವಯ ಶಿಕ್ಷಾ ಹರ್ ಅಪರಾಧಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

**ಮು.ಮಾ.1 ಒಂದು ಹಿಡಿ ಗಾತ್ರದ ಕಲ್ಲು ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದರಿಂದ ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಕಚೇರಿಗೆ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 06ನೇ ಏಪ್ರೀಲ್ 2026 ರಂದು ತೀರ್ಪನ್ನು ಘೋಷಿಸಲಾಯಿತು)

**ಸಹಿ/-**
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

## <u>ಅನುಬಂಧ</u>

**<u>ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:</u>**

ಪಿ.ಡಬ್ಲ್ಯೂ -1 : ಬಸವಂತ ರೆಡ್ಡಿ ತಂದೆ ಮಲ್ಲಿಕಾರ್ಜುನ ರೆಡ್ಡಿ
ಪಿ.ಡಬ್ಲ್ಯೂ -2 : ಚನ್ನಾ ರೆಡ್ಡಿ ತಂದೆ ಮಲ್ಲಿಕಾರ್ಜುನ ರೆಡ್ಡಿ
ಪಿ.ಡಬ್ಲ್ಯೂ -3 : ಆಕಾಶ್ ತಂದೆ ಬಸಂತು ತಿರುವಲಿ

ಪಿ.ಡಬ್ಲ್ಯೂ -4 : ನಾಗಪ್ಪ ತಂದೆ ಮಹದೇವ್ ಪೂಜಾರಿ

**ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳುಃ**

| | | |
|---|---|---|
| ನಿ.ಪಿ.1 | : | ದೂರು |
| ನಿಪಿ.1(ಎ) | : | ಪ್ರಾಸಾ.1ರವರ ಸಹಿ |
| ನಿ.ಪಿ.2 | : | ಪ್ರಾಸಾ.2 ರವರ ಹೇಳಿಕೆ ಭಾಗ |
| ನಿ.ಪಿ.3 | : | ಪ್ರಾಸಾ.3 ರವರ ಹೇಳಿಕೆ ಭಾಗ |
| ನಿ.ಪಿ.4 | : | ಪ್ರಾಸಾ.4 ರವರ ಹೇಳಿಕೆ ಭಾಗ |

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರಃ**

ಮು.ಮಾ.1 : ಒಂದು ಹಿಡಿ ಗಾತ್ರದ ಕಲ್ಲು

**ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿ ದಾರರ ವಿವರಃ**

- ಇಲ್ಲ -

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರಃ**

- ಇಲ್ಲ -

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ .ದಂಡಾಧಿಕಾರಿಗಳು,**
**ಸೇಡಂ .**

*****

BALU Digitally signed by BALU Date: 2026.04.06 14:16:21 +0530